Volume 2, Issue 5 May 2016 ISSN NO: 2454 - 9827

# North Asian International Research Journal Consortium

## *North Asian International Research Journal of Social Science & Humanities*

**Chief Editor**

Dr Rama Singh

Publisher

Dr. Bilal Ahmad Malik

Associate Editor

Dr. Nagendra Mani Trapathi

**Honorary**

Dr. Ashak Hussain Malik




# Welcome to NAIRJC

ISSN NO: 2454 - 9827

North Asian International Research Journal Social Science and Humanities is a research journal, published monthly in English, Hindi, Urdu all research papers submitted to the journal will be double-blind peer reviewed referred by members of the editorial board. Readers will include investigator in Universities, Research Institutes Government and Industry with research interest in the general subjects

## Editorial Board


| | | |
|---|---|---|
| J.Anil Kumar<br>Head Geography University of Thirvanathpuram | Sanjuket Das<br>Head Economics Samplpur University | Adgaonkar Ganesh<br>Dept. of Commerce B.S.A.U, Aruganbad |
| Kiran Mishra<br>Dept. of English,Ranchi University, Jharkhand | Somanath Reddy<br>Dept. of Social Work, Gulbarga University. | Rajpal Choudhary<br>Dept. Govt. Engg. College Bikaner Rajasthan |
| R.D. Sharma<br>Head Commerce & Management Jammu University | R.P. Pandday<br>Head Education Dr. C.V.Raman University | Moinuddin Khan<br>Dept. of Botany SinghaniyaUniversity Rajasthan. |
| Manish Mishra<br>Dept. of Engg, United College Ald.UPTU Lucknow | K.M Bhandarkar<br>Praful Patel College of Education, Gondia | Ravi Kumar Pandey<br>Director, H.I.M.T, Allahabad |
| Tihar Pandit<br>Dept. of Environmental Science, University of Kashmir. | Simnani<br>Dept. of Political Science, Govt. Degree College Pulwama, University of Kashmir. | Ashok D. Wagh<br>Head PG. Dept. of Accountancy, B.N.N.College, Bhiwandi, Thane, Maharashtra. |
| Neelam Yaday<br>Head Exam. Mat.K..M .Patel College Thakurli (E), Thane, Maharashtra | Nisar Hussain<br>Dept. of Medicine A.I. Medical College (U.P) Kanpur University | M.C.P. Singh<br>Head Information Technology Dr C.V. Rama University |
| Ashak Husssain<br>Head Pol-Science G.B, PG College Ald. Kanpur University | Khagendra Nath Sethi<br>Head Dept. of History Sambalpur University. | Rama Singh<br>Dept. of Political Science A.K.D College, Ald.University of Allahabad |


**Address: - Dr. Ashak Hussain Malik House No. 221 Gangoo, Pulwama, Jammu and Kashmir, India - 192301, Cell: 09086405302, 09906662570, Ph. No: 01933-212815,**
**Email: nairjc5@gmail.com , nairjc@nairjc.com , info@nairjc.com Website: www.nairjc.com**

# ಬಸವಣ್ಣನವರ ವಿಚಾರದಲ್ಲಿ ಕಾಯಕ ತತ್ವದ ವಿಚಾರಗಳು

**MAYUR KUDARI**

Research Scholar, Dep. of History, RCU.P.G. Centre, Toravi Road, Vijayapura

## ಬಸವಣ್ಣನ ವಿಚಾರದಲ್ಲಿ ಕಾಯಕ ಮತ್ತು ಕಾಯಕ ತತ್ವಗಳು

ವಚನಕಾರರ ಕಂಡುಂಡ ಅನುಭವದಲ್ಲಿ, ಅಂದರೆ ದೃಷ್ಟಿಯಲ್ಲಿ ಪ್ರಪಂಚವು ಸತ್ಯ, ಅದು ಸಾಧಕನಿಗೆ (ಬಸವಣ್ಣ ಹೇಳುವಂತೆ) ಕರ್ತಾರನ ಕಮ್ಮಟ. ವಚನಕಾರರೆಲ್ಲರೂ ಹೇಳರುವಂತೆ ಅದು ಲಿಂಗದ ಪ್ರಸಾದ ಪ್ರಸಾದ. ಶಿವ ಜಗವಾಗಲೂ ಬಲ್ಲ. ಜಗವಾಗದಿರಲೂ ಬಲ್ಲವನಾದುದರಿಂದ ಜಗತ್ತು ಸತ್ಯ, ಆದುದರಿಂದ ಜಗತ್ತು ಅದ್ವೈತತಿಗಳು ಹೇಳುವಂತೆ ಮಿಥ್ಯೆಯೂ ಅಲ್ಲ. ನಮ್ಮ ಅವಿದ್ಯೆ ಅಥವಾ ಭ್ರಮೆಯ ಪರಿಣಾಮವೂ ಅಲ್ಲ. ಆದರೂ ವಚನಕಾರರು ಜಗತ್ತು ಮಾಯೆ ಅಥವಾ ಮಾಯಾ ಶಕ್ತಿಯಿಂದ ರಚಿತವಾಗಿದೆ ಎಂದು ಹೇಳಲು ಕಾರಣವೆಂದರೇನು? ನಿಷ್ಕಲ ಲಿಂಗವು ಅಂಗಸ್ಥಲ ಮತ್ತು ಲಿಂಗಸ್ಥಲವೆಂದು ಎರಡು ಭಾಗವಾದಾಗ, ಅದರ ಶಕ್ತಿಯೂ ಕಲಾಶಕ್ತಿ ಮತ್ತು ಭಕ್ತಿ ಶಕ್ತಿ ಎಂದು ಭಾಗವಾಗುತ್ತದೆ.

ಬಸವಾದಿ ಶರಣರ ಧರ್ಮ ಸಾಧಾರಣ ಜನರ ಅಂದರೆ ಕಾಯಕ ಮಾಡುವವರ ಧರ್ಮ, ಆದರೆ ಪರಮೇಶ್ವರ ಆಗಮದಲ್ಲಿ ವೀರಶೈವನು ಕಟ್ಟಿಗೆಯನ್ನು ಮತ್ತೇನನ್ನು ತಲೆಯ ಮೇಲೆ ಹೊರಬಾರದು, ಗುದ್ದಲಿಯಿಂದ ಆಗಮ ಬಾರದು, ಭೂಮಿಯನ್ನು ಊಳಬಾರದು, ಏನನ್ನು ಕತ್ತರಿಸಬಾರದು ಎಂದು ಹೇಳಲಾಗಿದೆ. ಅಲ್ಲದೆ "ಲಿಂಗಧಾರಿಗಳು ತಮಗೆ ಸುಖಬೇಕಿದ್ದರೆ ಬ್ರಹ್ಮ ವೃತ್ತಿಯಿಂದ, ಕ್ಷಾತ್ರ ವೃತ್ತಿಯಿಂದ, ವೈಶ್ಯಾವೃತ್ತಿಯಿಂದ ಅಥವಾ ಶೂದ್ರ ವೃತ್ತಿಯಿಂದ, ಜೀವಿಸಬಾರದು. ಅವನು ದಾನವನ್ನು ಋಣವನ್ನು ಅತಿ ಸಂಗ್ರಹವನ್ನು ಮಾಡಬಾರದು, ಒಂದು ವೇಳೆ ಸುಖ ಪೂರ್ವಕ ಭೋಜನವು ದೊರೆಯದಿದ್ದರೆ, ಬಿಕ್ಷಾಟನೆಯನ್ನು ಮಾಡಬೇಕು ಎಂಬ ಆದೇಶ ನೀಡಲಾಗಿದೆ. ಆಗಮಗಳ ಈ ನಿಲುವು, ಒಂದು ಸಮಸ್ಯೆಯನ್ನು ಸೃಷ್ಟಿಸುತ್ತದೆ.

"ಬೇರುಂಡನ ಪಕ್ಷಿಗೆ ದೇಹ ಒಂದೇ
ತಲೆ ಎರಡರ ನಡುವೆ ಕನ್ನವಡ ಕಟ್ಟಿ
ಒಂದು ತಲೆಯಲ್ಲಿ ಹಾಲನೆರದು
ಒಂದು ತಲೆಯಲ್ಲಿ ವಿಷಯವನೆರೆದಡೆ
ದೇಹವೊಂದೇ ವಿಷ ಬಿಡುವುದೇ ಅಯ್ಯಾ?
ಲಿಂಗದಲ್ಲಿ ಪೂಜೆಯ ಮಾಡಿ ಜಂಗಮದಲ್ಲಿ ನಿಂದೆಯ ಮಾಡಿದಡೆ
ನಾ ಬೆಂದೆ ಕಾಣಾ, ಕೂಡಲಸಂಗಮದೇವಾ"

ಬಸವಣ್ಣನವರ ಆಧ್ಯಾತ್ಮಿಕ ಭೌತಿಕವಾದದ ಮಹತ್ವವನ್ನು ಸಾರುವ ವಚನವಿದು. ಗಂಡಭೇರುಂಡ ಪಕ್ಷಿಯು, ಕಾವ್ಯ ಪ್ರತಿಮೆಯಾಗಿ ಬಳಸಿಕೊಂಡು, ಆಧ್ಯಾತ್ಮಿಕ ಜಗತ್ತು ಮತ್ತು ಭೌತಿಕ ಜಗತ್ತಿನ ಮೂಲ ಒಂದೇ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಬೇರುಂಡನ ಎರಡು ತಲೆಗಳ ಮಧ್ಯ ಕನ್ನವಡ(ಪರದೆ) ಕಟ್ಟಿ ಒಂದು ಕಡೆ ಹಾಲು ಮತ್ತು ಇನ್ನೊಂದು ಕಡೆ ವಿಷ ಎರೆದರೆ ಅವೆರಡೂ ಒಂದೇ ಜಠರದಲ್ಲಿ ಕೂಡಿ ಎಲ್ಲವೂ ವಿಷವಾಗಿ ಪಕ್ಷಿ ಸಾಯುವದರಲ್ಲಿ ಸಂಶಯವಿಲ್ಲ. ಅದೇ ರೀತಿ ಇಷ್ಟಲಿಂಗ ಪೂಜಿಸಿ ಜಂಗಮ (ಸಮಾಜ) ಲಿಂಗವನ್ನು ಕಡೆಗಣಿಸಿದರೆ ಅಂದರೆ ಸಾಮಾಜಿಕ ಪ್ರಜ್ಞೆ ಇಲ್ಲದೆ ಬರೀ ಆಧ್ಯಾತ್ಮಿಕವಾಗಿ ಬದುಕಿದರೆ ಪ್ರಯೋಜನವಿಲ್ಲ ಎಂದು ಸೂಚಿಸಿದ್ದಾರೆ.

ವಿಜ್ಞಾನ ಮತ್ತು ಆಧ್ಯಾತ್ಮಗಳನ್ನು ಒಂಗು ಗೂಡಿಸುವ ಯತ್ನ ೨೧ನೇ ಶತಮಾನದಲ್ಲಿ ಬಿರುಸಿನಿಂದ ಪ್ರಾರಂಭವಾಗಿದೆ. ಹೀಗಾಗದಿದ್ದರೆ ಮಾನವಕುಲಕ್ಕೆ ಭವಿಷ್ಯವಿಲ್ಲ ಎಂಬ ತೀರ್ಮಾನಕ್ಕೆ ಜೀವಕಾರುಣ್ಯದಿಂದ ಕೂಡಿದ ವಿಜ್ಞಾನಿಗಳು ಮತ್ತು ತತ್ವಜ್ಞಾನಿಗಳು ವಿಶ್ವದ ಅನೇಕ ಕಡೆಗಳಲ್ಲಿ ಯತ್ನಿಸುತ್ತಿದ್ದಾರೆ ಆದರೆ ಬಸವಣ್ಣನವರು ೮೫೦ ವರ್ಷಗಳ ಹಿಂದೆಯೇ ಆಧ್ಯಾತ್ಮಿಕ ಜಗತ್ತಿನ ಸುಜ್ಞಾನ ಮತ್ತು ಭೌತಿಕ ವಿಜ್ಞಾನವನ್ನು ಒಂದುಗೂಡಿಸುವದರ ಮೂಲಕ ಹೊಸತನವನ್ನು ಸಾದಿದ್ದಾರೆ. ಈ ಸಂಗಮತ್ವಕ್ಕೆ ಆಧ್ಯಾತ್ಮಿಕ ಭೌತಿಕವಾದವೆಂದೂ ಬಸವಾದ್ವೈತವೆಂದೂ ರಂಜಾನ್ ದರ್ಗಾ ಅವರು ಪ್ರತಿಪಾದಿಸುತ್ತಾರೆ.

ಆಧ್ಯಾತ್ಮಿಕ ಭೌತಿಕವಾದದ ಪ್ರಕಾರ ಲಿಂಗಾಂಗ ಸಾಮರಸ್ಯ(ದ)ವೆಂದರೆ ಆಧ್ಯಾತ್ಮಿಕ ಜಗತ್ತು ಮತ್ತು ಭೌತಿಕ ಜಗತ್ತಿನ ಮಧ್ಯೆ ಅದ್ವೈತ ಸಾಧಿಸುವ ಭೇರುಂಡ ತತ್ವವೇ ಆಗಿದೆ. ಇದೇ ಬಸವಾದ್ವೈತ.

ವ್ಯಷ್ಟಿ-ಸಮಷ್ಟಿ, ಇಷ್ಟಲಿಂಗ-ಜಂಗಮಲಿಂಗ, ಮಾನವನ ಒಳಲೋಕ-ಹೊರಲೋಕ, ಆಧ್ಯಾತ್ಮಿಕಲೋಕ-ಭೌತಿಕ ಲೋಕ, ಆತ್ಮಜ್ಞಾನ-ವಿಜ್ಞಾನ ಇವುಗಳಲ್ಲಿ ಅದ್ವೈತವನ್ನು ಸಾದಿಸುವುದರ ಮೂಲಕ ಮೇಲು ಕೀಳುಗಳನ್ನು ಮೀರಿದ ಮಾನವೀಯ ಸಮಾಜದ ರಚನೆ ಮಾಡುವುದು ಬಸವಣ್ಣನವರ ಗುರಿಯಾಗಿತ್ತು. ಅವರು ಈ ನಿಟ್ಟಿನಲ್ಲಿ ಬಹಳಷ್ಟು ಸಾಧಿಸಿ ತೋರಿಸಿದರು.

ಸಾಂಪ್ರದಾಯಕವಾಗಿ ಬೆಳೆದು ಬಂದ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ನೇರವಾಗಿ ಎದುರಿಸದೆ, ಆಧ್ಯಾತ್ಮಿಕ ಭೌತಿಕವಾದದ ಹಿನ್ನೆಲೆಯಲ್ಲಿ ಸರ್ವ ಸಮಾನತೆಯ ಪರ್ಯಾಯ ಸಮಾಜವೊಂದನ್ನು ಮೌನ ಕ್ರಾಂತಿಯ ಮೂಲಕ ಹೇಗೆ ರಚಿಸಬೇಕು ಎಂಬುದನ್ನು ತೋರಿಸಿ ಕೊಟ್ಟವರು, ಮಹಾನುಭವಿ ಬಸವಣ್ಣನವರು. ಬಸವಣ್ಣನವರ ಈ ಮೌನಕ್ರಾಂತಿ ಇಡೀ ವಿಶ್ವಕ್ಕೆ ಮಾದರಿಯಾಗಿದೆ.

ಕಾಯಕ ಜೀವಿಗಳ ಸಮಾಜ : ನಮ್ಮ ಸಮಾಜ ಸಹಸ್ರಾರು ವರ್ಷಗಳಿಂದ ರೈತ ಕೇಂದ್ರಿತ ಸಮಾಜವಾಗಿದ್ದರು ಭೂಪಾಲರು ಮತ್ತು ಜಮೀನುದಾರರು ವಿದಿಸಿದ ಸಾಮಾಜಿಕ ನಿಯಮಗಳನ್ನು ಬಡರೈತರೂ ಪಾಲಿಸಬೇಕಿತ್ತು. ಯಥಾಸ್ಥಿತಿಯಲ್ಲಿ ಮುಂದುವರೆಸಿಕೊಂಡು ಹೋಗುವ ರೀತಿಯಲ್ಲಿ ಆಮ ಪದ್ಧತಿಯ ಸ್ವಯಂ ಪರಿಪೂರ್ಣ ಸಮಾಜ ವ್ಯವಸ್ಥೆ ಗಟ್ಟಿಗೊಂಡಿತ್ತು ಕಾಯಕ ಜೀವಿಗಳು ಜಾತಿ–ಉಪಜಾತಿ ಜೀವಿಗಳಾಗಿ ಪರಿವರ್ತನೆಗೊಂಡರು ಹಿಂದಿನಿಂದ ಬಂದ ರೈತಕೇಂದ್ರಿತ ಸಮಾಜದಲ್ಲೇ ಒಟ್ಟಾರೆ ಕಾಯಕ ಜೀವಿಗಳ ಕೇಂದ್ರಿತ ಪರ್ಯಾಯ ಸಮಾಜವನ್ನು ಮೊದಲಿಗೆ ರಚಿಸಿದ ಕೀರ್ತಿ ಬಸವಣ್ಣನವರಿಗೆ ಸಲ್ಲುತ್ತದೆ. ಈ ರೀತಿಯ ಬದಲಾವಣೆಯಿಂದ ಸಮಾಜದಲ್ಲಿ ಚಿಂತನ ಮಂಥನ ಪ್ರಾರಂಭವಾಯಿತು. ಪ್ರಶ್ನಿಸುವ ಮತ್ತು ಸಮಾನತೆಯ ಪ್ರಜ್ಞೆ ಮೂಡಿತು, ಹೀಗೆ ಅಸಮಾನತೆಯ ಸಮಾಜದಲ್ಲಿ ಸಮಾನತೆಯ ಪ್ರಜ್ಞೆಮೂಡಿಸುವ ಪರ್ಯಾಯ ಸಮಾಜ ರಚನೆಯ ರಹಸ್ಯವನ್ನು ಬಸವಣ್ಣನವರು ತಿಳಿಸಿಕೊಟ್ಟರು. ಬಸವಣ್ಣನವರ ಕಾಯಕ ತತ್ವ ಅರ್ಥಶಾಸ್ತ್ರ ಮತ್ತು ಪಾರಮಾರ್ಥ ಶಾಸ್ತ್ರದ ತಿರುಳನ್ನು ಒಳಗೊಂಡಿದೆ. ಕಾಯಕಕ್ಕೆ ದಾಸೋಹದ ಚೌಕಟ್ಟಿದೆ ಈ ದಾಸೋಹದ ಕಟ್ಟಳೆ ಇಲ್ಲದಿದ್ದರೆ ಸತ್ಕ್ರಿಯೆಯಿಂದ ಗಳಿಸಿದ ಹಣ ಸಂಗ್ರಹವಾದರೂ ಅಹಂ ಸೃಷ್ಟಿಯಾಗುವುದು ಸಮಾಜದಲ್ಲಿ ಮೇಲು ಕೀಳಿಗೆ ನಾಂದಿಯಾಗುವುದು ಜನತು ತಮ್ಮ ತಮ್ಮ ದೈಹಿಕ ಮತ್ತು ಮಾನಸಿಕ ಶಕ್ತಿಗೆ ಅನುಗುಣವಾಗಿ ವಿಭಿನ್ನಬಾಗಿರಬಹುದು, ವೈವಿಧ್ಯವು ನಿಸರ್ಗದ ನಿಯಮವಾಗಿದೆ, ಆದರೆ ಆಧ್ಯಾತ್ಮಿಕತೆಯು ಅದರ ಅಭಿನ್ನ ರೂಪವಾಗಿದೆ ದಾನ ಪಡೆಯುವವರು ಧೈನ್ಯಭಾವ ತಾಳುತ್ತಾ ಹೋಗುವರು. ಕೊಡುವವರಲ್ಲಿ ಅಹಂಕಾರ ಸೃಷ್ಟಿಯಾಗುವದ ಸಾಧ್ಯತೆಗಳಿವೆ. ಬಸವಣ್ಣನವರ ಪರ್ಯಾಯ ಸಮಾಜದಲ್ಲಿ ಧಾನಕ್ಕೆ ಸ್ಥಾನವಿಲ್ಲ ಅದರ ಸ್ಥಾನದಲ್ಲಿ ದಾಸೋಹವಿದೆ. ದಾಸೋಹವು ಕೊಡುವವನಲ್ಲಿ ವಿನಮ್ರ ಭಾವವನ್ನೂ ಪಡೆದು ಕೊಳ್ಳುವಲ್ಲಿ ಸಮತಾ ಭಾವವನ್ನೂ ಸೃಷ್ಟಿಸುತ್ತದೆ ಪರ್ಯಾಯ ಸಮಾಜದಲ್ಲಿ, ಶರಣ ಸಮಾಜದಲ್ಲಿ ಬೇಡುವವರು ಸಿಗದ ಕಾರಣ ಕೊಡುವವರು ಬಡವಾಗುತ್ತಿದ್ದಾರೆ.

ಕಾಯಕ ಸಿದ್ಧಾಂತವನ್ನು ಹೋಲುವ ತತ್ವಗಳು ನಾವು ಪ್ರತಿಪಾದಿಸಬಹುದು. ಕಾಯಕ ಮತ್ತು ಕರ್ಮ, ಕಾಯಕ ಮತ್ತು ಸರ್ವೋದಯ, ಕಾಯಕ ಮತ್ತು ಶ್ರಮ, ಎಂಬ ಮೂರು ತತ್ವವನ್ನು ಸಮಾಜಕ್ಕೆ ತಿಳಿಹೇಳಿದರು.

ಹೊರಜಗತ್ತು ಮನುಷ್ಯನನ್ನು ಆಳುತ್ತದೆ ಎಂಬುದು ಆಧುನಿಕ ಚಿಂತನೆಯಾಗಿದೆ ಒಳಜಗತ್ತು ಮನುಷ್ಯನನ್ನು ಆಳುತ್ತದೆ ಎಂಬುದು ಪುರಾತನ ಭಾವನೆಯಾಗಿದೆ. ಆದರೆ ಅಂತರಂಗ–ಬಹಿರಂಗ ಶುದ್ಧಿಯ ಮೂಲಕ ಒಳ ಮತ್ತು ಹೊರ ಜಗತ್ತುಗಳನ್ನು ಹೇಗೆ ಆಳಬೇಕು ಎಂಬುದನ್ನು ಬಸವಾದ್ವೈತ ಸೂಚಿಸುತ್ತದೆ.

ಬಸವಣ್ಣನವರು ಇಷ್ಟಲಿಂಗದ ಮೂಲಕ ವ್ಯಷ್ಠಿ ಪ್ರಜ್ಞೆ ಬೆಳೆಸಿದರು ಕಾಯಕದ ಮೂಲಕ ಸಾಮಾಜಿಕ ಶಕ್ತಿ ವೃದ್ಧಿಯಾಗುವಂತೆ ಮಾಡಿದರು ದಾಸೋಹದ ಮೂಲಕ ಸಮಷ್ಟಿ ಪ್ರಜ್ಞೆಯ ವಿಕಸನ ಮಾಡಿದರು. ಮಾನವನ ಆಂತರಿಕ ಜಗತ್ತು ಕಾಲಾತೀತವಾಗಿದೆ, ಆದರೆ ಬಾಹ್ಯ ಜಗತ್ತು ಸದಾ ಚಲನಶೀಲವಾಗಿದೆ ಎಂಬುದರ ಅರಿವು ಮೂಡಿಸಿದರು.

ದಾಸೋಹ ಪ್ರಜ್ಞೆಯ ಕಾಯಕ ತತ್ವವು ಸಮಾಜೋಕೌಂಟಿಕ ಅರ್ಥಶಾಸ್ತ್ರವಾಗಿದೆ. "ಶರಣಸತಿ ಲಿಂಗಪತಿ" ಎಂದು ಹೇಳುವಲ್ಲಿ ಇಡೀ ವಿಶ್ವವೇ ಕುಟುಂಬಮಯವಾಗಿದೆ. ಕುಟುಂಬ ವ್ಯವಸ್ಥೆಯನ್ನು ಸಾವಾಕಾಶವಾಗಿ ಕಳೆದು ಕೊಳ್ಳುತ್ತಿರುವ ಆಧುನಿಕ ಸಮಾಜ ಎಂಥ ದುರ್ಗತಿಯನ್ನು ತಲುಪಬಲ್ಲದು ಎಂಬುದಕ್ಕೆ ದೈನಂದಿನ ವಿದ್ಯಮಾನಗಳೇ ಸಾಕ್ಷಿಯಾಗಿವೆ.

(ಹೊ)ಪೊಸ ಪ್ರಜ್ಞೆ : ಬಡ್ಡಿಯಿಂದ ಸೃಷ್ಟಿಯಾಗುವ ಹಣವಿಲ್ಲ ಅನಿಷ್ಟಗಳ ಮೂಲ ಎಂಬುದನ್ನು ಬಸವಣ್ಣನವರು ಅರಿತಿದ್ದರು. ಬಸವಣ್ಣನವರ ವಿಮೋಚನಾ ಸಿದ್ಧಾಂತ ಉದ್ಧಂಡ ವೃತ್ತಿಗೆ ಮತ್ತು ಬಡ್ಡಿಹಣಕ್ಕೆ ಅವಕಾಶವಿಲ್ಲ, ಬಸವಣ್ಣನವರು ಬಡವರಿಗೆ ಹೊಸ ಕಾಯಕ ಕೊಡಲಿಲ್ಲ, ಹೊಸ ಪ್ರಜ್ಞೆ ಕೊಟ್ಟರು ಬೇರೆಯವರಿಗೆ ಸಮಸ್ಯೆಯುಂಟುಮಾಡದ ಯಾವುದೇ ಕಾಯಕ ಕೀಳಲ್ಲ ಎಂದರು.

ಮಾನವ ಒಳ ಮತ್ತು ಹೊರ ಜಗತ್ತುಗಳಲ್ಲಿ ಏಕಕಾಲಕ್ಕೆ ಬದುಕುವದರಿಂದ ಎರಡು ಜಗತ್ತುಗಳನ್ನು ಸಮಾನವಾಗಿ ನೋಡಬೇಕು ಹಾಗೆ ನೋಡುವ ಕ್ರಮವನ್ನು ಬಸವಣ್ಣನವರು ಬದುಕಿ ತೋರಿಸಿದರು.

ಬಸವಣ್ಣನವರು ಬಿಜ್ಜಳನ ಸಾಮ್ರಾಜ್ಯ ಶಕ್ತಿಯನ್ನು ಪ್ರಶ್ನಿಸಲಿಲ್ಲ ಆತನ ಸಮಾಜದ ವ್ಯವಸ್ಥೆಗೂ ಭಂಗತರಲಿಲ್ಲ. ಅರ್ಥ ಸಚಿವರಾಗಿ ಪ್ರಧಾನಿಯಾಗಿ ಬಿಜ್ಜಳನ ಭಂಡಾರ ತುಂಬಿ ತುಳುಕುವಂತೆ ಮಾಡಿದರು. ಕಾಯಕದ ಮಹತ್ವ ಸಾರಿ ಜನ ದುಡಿಮೆಯ ಮೂಲಕ ಸಮೃದ್ಧ ಜೀವನದ ಪಥ ಹಾಕಿ ಕೊಟ್ಟರು. ಬಿಜ್ಜಳನ ಸಾಂಪ್ರದಾಯಿಕ ವ್ಯವಸ್ಥೆಗೂ ಅವರೇ ಮುಂದಾಳಾಗಿದ್ದರು. ಸೃಷ್ಟಿಯಾಗುತ್ತಿದ್ದ ಹೊಸ ಪರ್ಯಾಯ ಸಮಾಜಕ್ಕೂ ಅವರೇ ಮುಂದಾಳಾಗಿದ್ದರು. ಜಾಗತಿಕ ಇತಿಹಾಸದಲ್ಲಿ ಇಂಥ ಇನ್ನೊಂದು ಉದಾಹರಣೆ ಇಲ್ಲ! ಹೀಗೆ ತಾವು ವಿರೋದಿಸುವ ವ್ಯವಸ್ಥೆಯನ್ನೂ ಸೃಷ್ಟಿಸುವ ವ್ಯವಸ್ಥೆಯನ್ನು ಏಕಕಾಲಕ್ಕೆ ನಿಭಾಯಿಸಿದ ಧೀರೋದಾತ್ತ ನಾಯಕರು ಬಸವಣ್ಣನವರು.

ಬಸವಣ್ಣನವರ ಪರ್ಯಾಯ ಸಮಾಜದಲ್ಲಿ ಇರುವಿಕೆಗೆ ಮತ್ತು ಬದುಕಿಗೆ ಸಮಾನ ಮಹತ್ವವಿತ್ತು ಇರುವಿಕೆಯು ಭೌತಿಕ ಪ್ರಕ್ರಿಯೆಯಾದರೆ ಬದುಕು ಆಧ್ಯಾತ್ಮಿಕ ಪ್ರಕ್ರಿಯೆಯಾಗಿದೆ. ಹೀಗೆ ಬಸವಣ್ಣನವರ ತತ್ವವು ಈ ಬದುಕನ್ನು ಗೌರವಿಸುವ ತತ್ವವಾಗಿದೆ.

ಬಸವಣ್ಣನವರು ಸಮಾಜದಲ್ಲಿ ಭವಿ ಮತ್ತು ಭಕ್ತ ವರ್ಗಗಳನ್ನು ಗುರುತಿಸಿದರು. ಈ ಜಗತ್ತು ಭೋಗವಸ್ತು ಎಂದು ಭಾವಿಸುವವರು, ಭವಿಗಳು ಯಾವುದೇ ಜೀವಿಗೆ ತೊಂದರೆಯಾಗದಂತೆ ಬದುಕುತ್ತ ಕಾಯಕದ ಮೂಲಕ ಈ ಜಗತ್ತಿನ ವಸ್ತುಗಳನ್ನು ಹಿತಮಿತವಾಗಿ ಬಳಸಿಕೊಳ್ಳುತ್ತಾ ಅನಂತವಾದ ಆಧ್ಯಾತ್ಮಿಕ ಜಗತ್ತಿನ ಕಡೆಗೆ ಸಾಗುವವರು ಭಕ್ತರು.

ಬಸವ ಎಂದರೆ ಒಬ್ಬ ವ್ಯಕ್ತಿ ಅಲ್ಲ. ತ್ರಕ್ಷರ ಮಂತ್ರ, ವ್ಯಕ್ತಿ ಕುಟುಂಬ, ಸಮಾಜ, ಮತ್ತು ವಿಶ್ವವನ್ನು ಬೆಸೆಯುವ ಮಂತ್ರ, ಮೇಲು ಕೀಳುಗಳನ್ನು ಹೋಗಲಾಡಿವ ಮಂತ್ರ.

ಬಸವಣ್ಣನವರ ಪರ್ಯಾರ ಸಮಾಜದಲ್ಲಿ ಭೂಪಾಲ(ಮೋಳಿಗೆ ಮಾರಯ್ಯ)ರಂಥ ಶ್ರೀಮಂತರು, ವಸ್ತು ಮೋಹದಿಂದ ಹೊರಬರುವರು. ಆಯ್ದಕ್ಕಿ ಲಕ್ಕಮ್ಮರಂಥ ಬಡವರು ವಸ್ತು ಮೋಹಕ್ಕೆ ಒಳಗಾಗದೆ ಇರುವರು. ಎಲ್ಲರಲ್ಲೂ ಎಲ್ಲ ಅಹಂಕಾರದಿಂದ ಹೊರಬಂದು ಪ್ರೇಮದ ಅತ್ಯುನ್ನತ ಮಟ್ಟವನ್ನು ತಲುಪವರು.

ಕಾಯಕದಲ್ಲಿದ್ದು ಬದುಕುವ ಕಲೆ : ನಾವು ಹೇಗೆ ಅಸ್ತಿತ್ವದಲ್ಲಿರಬೇಕು, ಹೇಗೆ ಬದುಕಬೇಕು, ಹೇಗೆ ಮಾತನಾಡಬೇಕು, ಹೇಗೆ ಉಣಬೇಕು, ಹೇಗೆ ಉಡಬೇಕು, ಬದುಕಿಗೆ ಅನಿವಾರ್ಯವಲ್ಲದ ಐಹಿಕ ವಸ್ತುಗಳ ಮೋಹದಿಂದ ಹೇಗೆ ಹೊರ ಬರಬೇಕು, ಚಿಂತೆಯಿಂದ ಬಿಡಿಸಿಕೊಂಡು ಸಮಸ್ಯೆಗಳನ್ನು ಹೇಗೆ ಎದುರಿಸಬೇಕು ಸಮಾಜದಲ್ಲಿ ಯಾವ ರೀತಿ ವ್ಯವಹರಿಸಬೇಕು, ದೇಶದ ಕಾನೂನಿಗೆ ಯಾವ ರೀಗೆ ಗೌರವಿಸಬೇಕು, ಯಾವುದನ್ನು ನರಕ ಎಂದು ತಿರಸ್ಕರಿಸಬೇಕು ಯಾವುದನ್ನು ಸ್ವರ್ಗ ಎಂದು ಸ್ವೀಕರಿಸಬೇಕು. ಮಾನವ ಏಕತೆಯನ್ನು ಹೇಗೆ ಸಾಧಿಸಬೇಕು ದ್ವೇಷಾಸೂಯೆಗಳಲ್ಲದೆ ಮತ್ತು ರಕ್ತ ಪಾತವಿಲ್ಲದೆ ನ್ಯಾಯಬದ್ಧವಾದ ಸಮಾಜವನ್ನು ಯಾವ ರೀತಿ ನಿರ್ಮಾಣ ಮಾಡಬೇಕು, ಅನಿಷ್ಟಗಳ ವಿರುದ್ಧ ಹೇಗೆ ಹೋರಾಡಬೇಕು, ನಮ್ಮೊಳಗೆ ಹೇಗೆ ಜಗಳವಾಡಬೇಕು ಮತ್ತು ನಮ್ಮ ಹೊರಗೆ ಹೇಗೆ ಸೌಹಾರ್ದ ಸಾದಿಸಬೇಕು, ನಾವು ಏಕೆ ಗಳಿಸಬೇಕು, ಹೇಗೆ ಗಳಿಸಬೇಕು ಮತ್ತು ಹೇಗೆ ಖರ್ಚು ಮಾಡಬೇಕು, ಪಂಚ ಮಹಾಭೂತಗಳನ್ನು ಹೇಗೆ ಅರಿತುಕೋಳ್ಳಬೇಕು, ಹೇಗೆ ಸಹಿಸಿಕೊಳ್ಳಬೇಕು, ಕೆಟ್ಟದನ್ನು ಹೇಗೆ ತೆಗಳಬೇಕು ಬದುಕಿನ ಎಲ್ಲ ಏರಿಳಿತಗಳನ್ನು ಹೇಗೆ ಸಹಿಸಿಕೊಳ್ಳಬೇಕು, ನಮ್ಮ ಹೆಂಡಿರು ಮಕ್ಕಳೊಂದಿಗೆ ಮತ್ತು ಸಮಾಜದಲ್ಲಿ ಹೇಗೆ ನಡೆದು ಕೊಳ್ಳಬೇಕು, ನಮ್ಮ ಪ್ರವೃತ್ತಿಗಳನ್ನು ಹೇಗೆ ಬಳಸಿಕೊಳ್ಳಬೇಕು ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ಹೇಗೆ ನಿರ್ಧರಿಸಬೇಕು, ನಮ್ಮನ್ನು ನಾವು ಹೇಗೆ ವಿಮರ್ಶೆಗೆ ಒಳಪಡಿಸಬೇಕು, ಬೆರೆಯುವರನ್ನು ಹೇಗೆ ವಿಮರ್ಶೆ ಮಾಡಬೇಕು, ಯಾವರೀತಿ ಸತ್ಯ ನುಡಿಯಬೇಕು, ಯಾವರೀತಿ ಪಶ್ಚಾತಾಪ ಪಡಬೇಕು. ಧಾರ್ಮಿಕತೆ ಯಾವುದು, ಧರ್ಮ ಯಾವುದು, ಆಧ್ಯಾತ್ಮ ಯಾವುದು, ಆತ್ಮ ಪ್ರಜ್ಞೆಯಾವುದು ಮತ್ತು ಪರಿಪೂರ್ಣವಾದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು, ಇಷ್ಟಲಿಂಗದ ಮೂಲಕ ಮಾನಸಿಕ ವ್ಯಕ್ತಿತ್ವ ಹೇಗೆ ಬೆಳೆಯುವುದು, ಇಡೀ ಸಮಾಜವೇ ಜಂಗಮ ಲಿಂಗವೆಂದು ಭಾವಿಸಿ ದಾಸೋಹದ ಮೂಲಕ ಸಮಾಜಿಕ ವ್ಯಕ್ತಿತ್ವವನ್ನು ಹೇಗೆ ಪಡೆಯುವುದು. ಶಿವಯೋಗದಿಂದ ಮಾನಸಿಕ ವ್ಯಾಯಾಮ ದಾಸೋಹದಿಂದ ಸಾಮಾಜಿಕ ವ್ಯಾಯಾಮ ಮತ್ತು ಕಾಯಕದಿಂದ ದೈಹಿಕ ವ್ಯಾಯಾಮ ಯಾವ ರೀತಿಯಲ್ಲಿ ದೈಹಿಕ ಮತ್ತು ಸಾಮಾಜಿಕ ಶಕ್ತಿಗಳನ್ನು ಸದ್ಬಳಕೆ ಮಾಡಿಕೊಳ್ಳುವುದು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹೇಗೆ ಪಡೆಯುವುದು, ಹೊರಗಿನ ಕ್ರಾಂತಿಯನ್ನು ಸಾಧಿಸವುದುಕ್ಕಾಗಿ ಒಳಗಿನ ಕ್ರಾಂತಿ ಯಾವ ರೀತಿ ನಡೆಯಬೇಕು, ಹಳೆಯ ವ್ಯವಸ್ಥೆಗೆ ವಿಮುಖವಾಗಿ ಮತ್ತು ಪರ್ಯಾಯ ವ್ಯವಸ್ಥೆಗೆ ವಿಮುಖವಾಗಿ ಮತ್ತು ಪರ್ಯಾಯ ವ್ಯವಸ್ಥೆಯಲ್ಲಿ

ಕಾರ್ಯೋನ್ಮುಖವಾಗಿ ಸೈನಿಕರನ್ನು ಬಳಸದೆ ಮತ್ತು ಪ್ರತ್ಯೆಕ್ಷ ಹೋರಾಟವನ್ನು ಮಾಡದೆ ಪ್ರಜ್ಞಾಪೂರ್ವಕವಾದ ಮೌನಕ್ರಾಂತಿಯನ್ನು ಯಾವ ರೀತಿ ಮಾಡಬೇಕು, ತಾನು ತಾನಾಗಿ ನೋಡುವ ಆತ್ಮಮುಖಿ ತಾನೇ ಸಕಲ ಜೀವಿಗಳಾಗಿ ನೋಡುವ ಜೀವಾತ್ಮಮುಖಿ ತನ್ನನ್ನು ತಾನು ಅನಂತವಾಗಿ ನೋಡವು ಜೀವಾತ್ಮಮುಖಿ, ಸಕಲ ಜೀವಾತ್ಮರಿಗೆ ಲೇಸನೆ ಬಯಸುತ್ತಾ ಹೇಗೆ ವಿಶ್ವಮಾನವರಾಗಿ ರೂಪಗೊಳ್ಳಬೇಕು ಎಂಬುದನ್ನು ಬಸವಣ್ಣನವರು ನಮಗೆ ಕಲಿಸಿಕೊಟ್ಟರು.

ಬಸವಣ್ಣನ ಮೌನಕ್ರಾಂತಿ : ಬಸವಣ್ಣನ ಕ್ರಾಂತಿ ವೈಚಾರಿಕ ಕ್ರಾಂತಿಯಾಗಿದೆ ಕಮುನಿಷ್ಟರಂತೆ, ಪ್ರತ್ಯೇಕ್ಷ ವರ್ಗ ಹೋರಾಟ ಮಾಡದೆ, ಹುತಾತ್ಮ ಭಗತಸಿಂಗ್ ಹಾಗೆ ರಾಜ್ಯ ವ್ಯವಸ್ಥೆಯ ವಿರುದ್ಧ ಬಂಡೇಳದೆ ಅಥವಾ ಮಹಾತ್ಮಾ ಗಾಂಧೀಜಿವರ ಹಾಗೆ ಯಾವುದೇ ಅಸಹಕಾರ ಚಳುವಳಿಯನ್ನು ಹೂಡದೆ ಪರಂಪರಾಗತ ರಾಜ್ಯ ಶಕ್ತಿ ಮತ್ತು ಸಮಾಜ ವ್ಯವಸ್ಥೆಯ ಬಂಧದ ಒಳಗಡೆಯ ಪರ್ಯಾಯ ಸಮಾಜ ವ್ಯವಸ್ಥೆಯನ್ನು ಸಮಸ್ಥಿತವಾಗಿ ರೂಪಿಸುವುದರ ಮೂಲಕ ಅದ್ವಿತಿಯ ಮೌನಕ್ರಾಂತಿಗೆ ೧೨ನೇ ಶತಮಾನದಲ್ಲಿ ನಾಂದಿ ಹಾಡಿದರು. ಬಸವಣ್ಣನವರ ಕ್ರಾಂತಿ ಅಂತಿಮಘಟ್ಟ ತಲುಪಿದ್ದರೆ ಬಿಜ್ಜಳನಂಥ ದೊರೆಗಳ ರಾಜ್ಯವ್ಯವಸ್ಥೆಯೂ ಮುಂದುವರೆಯುತ್ತಿರಲಿಲ್ಲ, ಜಿಡ್ಡುಗಟ್ಟಿದ ಸಮಾಜ ವ್ಯವಸ್ಥೆಯೂ ಇರುತ್ತಿರಲಿಲ್ಲ.

"ಉಪಸಹ ವೇದಕ್ಕೆ ಬರೆಯಕಟ್ಟುವೆ ಶಾಸ್ತ್ರಕ್ಕೆ ನಿಗಳವನಿಕ್ಕುವೆ" : ಎಂದು ಹಳೆಯದರಲ್ಲಿಯ ಅಸಂಬದ್ಧತೆಯನ್ನು ಪ್ರಶ್ನಿಸಿದರು. ಅವರು ತಮ್ಮನ್ನು ಅಕ್ರಮ ಸಂತಾನದ ಪ್ರತೀಕವಾಗಿ ನೋಡಿಕೊಳ್ಳುವ ಮೂಲಕ ಹೊಲೆ ಮಾದಗಿರಿಗೂ ಕಡೆಯಾಗಿ ನಿಂತು ಹುಟ್ಟಿನ ಮೂಲದ ಬಿಣ ಅಹಂಭಾವವನ್ನು ಅಲ್ಲಗೆಳೆದರು. " ಹೊನ್ನಿ ನೊಳಗೊಂದೊರೆ ಸೀರೆಯೋಲಗೊಂದೆಳೆಯ ಇಂದಿಂಗೆ ನಾಳಂಗೆ ಬೇಕೆಂದೆನಾದಡೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ ಎಂದು ಹೇಳಿ ನರನ ಸಂಗ್ರಹ ಬುದ್ಧಿಯ ಹಿಂಡಿರುವ ಸಾಮಾಜಿಕ ಕ್ರೌರ್ಯವನ್ನು ತೋರಿಸಿಕೊಟ್ಟರು. ನಿನ್ನ ನಾನರಿಯದ ಮುನ್ನ ನೀನೆಲ್ಲಿ ಇದ್ದೆ? ಎನ್ನೊಳಗಿದ್ದು ನಿನ್ನ ತೋರಲಕ್ಕೆ ನೀನೇ ರೂಪಾದೆ" ಎಂದು ಅಂತಃ ಸಾಕ್ಷಿಯನ್ನೇ ದೇವರೆಂದು ಸೂಚಿಸಿದರು. ಇಷ್ಟಲಿಂಗವನ್ನು ಅಂತಃ ಸಾಕ್ಷಿಯ ಪ್ರತೀಕವಾಗಿ ಕಂಡರು. ಇಡೀ ವಿಶ್ವವನ್ನು ಜಂಗಮ ಲಿಂಗದ ರೂಪದಲ್ಲಿ ನೋಡಿದರು " ಕಾಯಕವೇ ಕೈಲಾಸ ಎಂದು ಬೋದಿಸಿದರು, ಕೈಲಾಸ ವೆಂಬುದೇನೋ ಪೃಥ್ವಿಯ ಮೇಲೊಂದು ಮೊರಡಿ ಎಂದು ಅವರು ಸ್ವರ್ಗದ ಭ್ರಮೆಯನ್ನು ಕಳೆಯುವುದರ ಜೊತೆಗೆ ಭೂಮಿಯ ಮಹತ್ವದ ಮನವರಿಗೆ ಮಾಡಿಕೊಟ್ಟರು.

ಇಂದಿನ ಆಧುನಿಕ ಯುಗದಲ್ಲಿ ಅವರ ಕಾಯಕ ತತ್ವ ಅಂದರೆ"ಬಸವ ರಾಜ್ಯದ ಸಿರಿಯು ಬಸವ ಬಡವರ ನಿಧಿಯು" ಎಂದು ಜನಪದ ಕವಿಯು ಮನ ತುಂಬಿ ಹಾಡಿದ್ದು ಸತ್ಯ ಸಂಗತಿ.

## ಗ್ರಂಥಋಣ


೧. ಅನುಭವ ಮಂಟಪ : ಮಾತೆ ಮಹಾದೇವಿ

೨. ಬಸವ ಪಥ : ಡಾ.ತಿಪೇರುದ್ರಸ್ವಾಮಿ

೩. ಬಸವ ಚಳುವಳಿ ಮತ್ತು ಕ್ರಾಂತಿ : ರಂಜಾನ ದರ್ಗಾ

೪. ಬಸವ ಚೇತನ ಮತ್ತು ಇತರ ಕೃತಿಗಳು : ಡಾ. ಟಿ. ಜಿ. ಪ್ರಭಾಶಂಕರ 'ಪ್ರೇಮಿ'

೫. ಮಾರ್ಕ್ಸವಾದ ಮತ್ತು ಕಾಯಕತತ್ವ : ಡಾ.ಮು.ಗು.ಬಿರಾದಾರ

೬. ವಚನ ಚಳುವಳಿ : ಡಾ.ಇಮ್ರಾಪೂರ

೭. ವಚನ ಸಾಹಿತ್ಯ : ಎಂ. ಚಿದಾನಂದ ಮೂರ್ತಿ

೮. ವೀರ ಶೈವ ಚರಿತ್ರೆ ಮತ್ತು ಚಾರಿತ್ರಿಕ ಗ್ರಂಥಗಳು : ಶ್ರೀ ಬಿ.ಬಿ.ಶ್ರೀನಿವಾಸರಾವ್

೯. ಶರಣ ದರ್ಶನ (ಸಮಗ್ರಸಾಹಿತ್ಯ) : ಡಾ.ಎಸ್.ಶಿವರಾಜಪ್ಪನವರ

೧೦. ಶರಣರು ಕಂಡ ಬಸವಣ್ಣ : ಎಚ್.ಡಿ.ಚಂದನಗೌಡರ್

೧೧. ಸಗರನಾಡು ಸಂಸ್ಕೃತಿ ಸಮೀಕ್ಷೆ : ಡಾ.ಅಬ್ದುಲ ಕರೀಮ ಗಂಗಾವತಿ